ದಿನಾಂಕ : 21.09.2021 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಪಾಟೀ ಸವಾಲು : **1** ನೇ ಪ್ರತಿವಾದಿಯ ಪರ **ಶ್ರೀ** ಎಸ್. ವೈ.ಎಸ್ **ವಕೀಲರಿಂದ,**

ನನ್ನ ತಾತನ ಹೆಸರು ರಾಮಯ್ಯ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ನಿಂಗಮ್ಮ. ನನ್ನ ತಾತನಿಗೆ 1) ಗುಂಡಪ್ಪ 2) ಶಿವಪ್ಪ 3 ) ಕಲ್ಲಪ್ಪ 4) ಮಲ್ಲೆಪ್ಪ ಎಂದು ನಾಲ್ಕು ಜನ ಮಕ್ಕಳು ಎಂದರೆ ಸರಿ. ಗುಂಡಪ್ಪ, ಕಲ್ಲಪ್ಪ ಮತ್ತು ಮಲ್ಲೆಪ್ಪರವರು ಬಳ್ಳಾರಿ ಮುನ್ಸಿಪಾಲ್ಟಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಕಲ್ಲಪ್ಪನ ಮಗ ಎಂದರೆ ಸರಿ. ಮಲ್ಲೆಪ್ಪ ನಿಗೆ ಮಕ್ಕಳು ಇಲ್ಲ. 1 ನೇ ಪ್ರತಿವಾದಿಯೂ ಶಿವಪ್ಪನ ಮಗ ಎಂದರೆ ಸರಿ. ನಾನು 4 ನೇ ತರಗತಿಯರವರೆಗೆ ಓದಿರುತ್ತೇನೆ. ದಾವಾ ಆಸ್ತಿ ನನ್ನದು ಇರುತ್ತದೆ ಎಂದು ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ. 1121.ಎ. ಅದರ ಕ್ಷೇತ್ರ 1 ಎಕರೆ 78 ಸೆಂಟ್ಸ್ ಇರುತ್ತದೆ. ಸರ್ವೆ ನಂ. 1121.ಎ. ನೇದರಲ್ಲಿ 1 ಎಕರೆ 78 ಸೆಂಟ್ಸ್ ಆಸ್ತಿಯನ್ನು ನನ್ನ ತಂದೆ ಸೀನಪ್ಪ ತಂದೆ ಆಂಜಿನೆಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆಸ್ತಿ ಸರ್ವೆ ನಂ. 1121/ಎ ಕ್ಷೇತ್ರ 2 ಎಕರೆ 20 ಸೆಂಟ್ಸ್ ಆಸ್ತಿ ನನಗಾಗಲಿ, ನನ್ನ ತಂದೆಗಾಗಲಿ ಬಂದಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಹಾಜರು ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಪಿ-1 ರಂತೆ ಸರ್ವೆ ನಂ. 1084.ಎ/2 ನೇದರಲ್ಲಿ 5 ಎಕರೆ 15 ಸೆಂಟ್ಸ್ ಮತ್ತು ಸರ್ವೆ ನಂ. 1121.ಬಿ ನೇದರಲ್ಲಿ 4 ಎಕರೆ ಹೀಗೆ ಒಟ್ಟು 9 ಎಕರೆ 15 ಸೆಂಟ್ಸ್ ಆಸ್ತಿ ನನ್ನ ತಂದೆ ಕಲ್ಲಪ್ಪ ರವರಿಗೆ ಮಂಜೂರಾಗಿರುತ್ತದೆ ಎಂದು ತೋರಿಸಲು ನಾನು ನಮೂನೆ-10 ನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಗಳು ಮೂಲತಃ ಹಳೆ ಸರ್ವೆ ನಂ. 715.ಎ ನೇದಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ-3 ರಂತೆ ನನ್ನ ತಂದೆ ಸರ್ವೆ ನಂ. 715 ರಲ್ಲಿ ಒಟ್ಟು 8 ಎಕರೆ ಸ್ವಾಧೀನದಲ್ಲಿದ್ದರು ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ-3 ರಂತೆ ನನ್ನ ತಂದೆ ಸಲ್ಲಿಸಿದ ಅರ್ಜಿಗೆ ಭೂ ನ್ಯಾಯಾ ಮಂಡಳಿಯೂ subject to survey and measurement and possession ಎಂದು ನಿಪಿ-1 ರಂತೆ ನಮೂನೆ- 10 ನ್ನು ನೀಡಿರುತ್ತಾರೆ

ಎಂದರೆ ಸರಿ. ನಿಪಿ-5 ರಲ್ಲಿ ನನ್ನ ತಂದೆ ನೀಡಿದ ಹೇಳಿಕೆ ಸರಿ ಇರುತ್ತದೆ. ನಿಪಿ- 22 ರ ಪ್ರಕಾರ ಸರ್ವೆ ಮಾಡಿ ನನ್ನ ತಂದೆ ಕೇವಲ 5 ಎಕರೆ 93 ಸೆಂಟ್ಸ್ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ವರದಿ ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-1 ನಮೂನೆ- 10 ತಾಲುಕೂ ಕಛೇರಿಯಲ್ಲಿ ರದ್ದು ಮಾಡಿರುತ್ತಾರೆ. ನಮೂನೆ - 10 ರದ್ದು ಮಾಡಿದ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ಪುನಃ ಹಾಜರು ಮಾಡಿದ ನಮೂನೆ-10 ನನಗೆ ಸಂಬಂಧಿಸಿದ್ದೇ ಇರುತ್ತದೆ. ಅದನ್ನು ನನ್ನ ತಂದೆ ಕಲ್ಲಪ್ಪನ ಹೆಸರಿಗೆ ನೀಡಿದ್ದಾರೆ ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ ಸರ್ವೆ ನಂಬರ್ 1084.ಎ/2 ರ ಕ್ಷೇತ್ರ 4 ಎಕರೆ 15 ಸೆಂಟ್ಸ್ ಮತ್ತು ಸರ್ವೆ ನಂ. 1121.ಎ ನೇದರ ಕ್ಷೇತ್ರ 1 ಎಕರೆ 78 ಸೆಂಟ್ಸ್ ಮಾತ್ರ ಎಂದು ತೋರಿಸಿರುತ್ತಾರೆ ಎಂದರೆ ಸರಿ. ನಾನು ಹಾಜರು ಮಾಡಿದ ದಾಖಲೆಗಳ ಪ್ರಕಾರ ನನ್ನ ತಂದೆ ಕೇವಲ 1 ಎಕರೆ 78 ಸೆಂಟ್ಸ್ ಮಾತ್ರ ಬಂದಿರುತ್ತದೆ ಎಂದರೆ ಸಾಕ್ಷಿಯೂ ಅದು ತಪ್ಪಾಗಿರುತ್ತದೆ ಅದನ್ನು ಸರಿ ಪಡಿಸಲು ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ತಿದ್ದುಪಡಿ ಮಾಡಲು ಅರ್ಜಿಯನ್ನು ನನ್ನ ತಂದೆ ಕೊಟ್ಟಿರುತ್ತಾರೆ. ನನ್ನ ತಂದೆ ಸಲ್ಲಿಸಿದ ತಕರಾರು ಅರ್ಜಿಯ ನಕಲನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನನ್ನ ತಂದೆಯ ಹೇಳಿಕೆಯ ಪ್ರಕಾರ ನಿಪಿ-8 ರಂತೆ ಮಾತ್ರ ಆಸ್ತಿ ಬಂದಿರುತ್ತದೆ ದಾವಾ ಆಸ್ತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಯ ಪೂರ್ವಕ್ಕೆ ಸೂರ್ಯ ಎನ್ನುವರ ಆಸ್ತಿ ಇದೆ, ಪಶ್ಚಿಮಕ್ಕೆ ವೀರಣ್ಣ ಎನ್ನುವರ ಆಸ್ತಿ ಇದೆ, ಉತ್ತರಕ್ಕೆ ರಸ್ತೆ ಇದೆ ಮತ್ತು ದಕ್ಷಿಣಕ್ಕೆ ಕಲ್ಲಪ್ಪ ರವರ ಆಸ್ತಿ ಇದೆ. ಈಗ ನಾನು ಹೇಳಿರುವ ಚೆಕ್ಕು ಬಂದಿಯನ್ನು ನನ್ನ ವಾದ ಪತ್ರದಲ್ಲಿ ಬರೆಯಿಸಿರುವುದಿಲ್ಲ. ನನ್ನ ತಂದೆಗೆ ಸರ್ವೆ ನಂ. 1121.ಎ ನೇದರಲ್ಲಿ ಕೇವಲ 1 ಎಕರೆ 78 ಸೆಂಟ್ಸ್ ಮಾತ್ರ ಬಂದಿರುತ್ತದೆ ಮತ್ತು ಅದನ್ನು ನನ್ನ ತಂದೆ ಈಗಾಗಲೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ನನ್ನ ದೊಡ್ಡಪ್ಪನ ಮಗ ಎಂದರೆ ಸರಿಯಲ್ಲ. ಅವರು ನನ್ನ ದೂರುದ ಸಂಬಂಧಿ. ಸರ್ವೆ ನಂ. 1121.ಎ ನೇದರ ಪಶ್ಚಿಮ ದಿಕ್ಕಿಗೆ ಸರ್ವೆ ನಂ, 715.ಎ ಪೈಕಿ 90 ಸೆಂಟ್ಸ್ ಆಸ್ತಿಯೂ ಈಗಲೂ ಸಹ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**